ದಿನಾಂಕಃ 26-08-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎ ಕೆ ವಕೀಲರಿಂದಃ

1. ನಿಮ್ಗೆ ರಿಯಲ್ ಸ್ಟೇಟ್ ಬಿಜಿನೆಸ್ ಮಾಡುವ ಕನವಳ್ಳಿ ಗ್ರಾಮದ ಮೌಲಸಾಬ್ ಗಣಜೂರು ಅವರ ಪರಿಚಯ ಇದೆಯಾ ಎಂದರೆ ಸಾಕ್ಷಿ ಇದೆ ಅಂತಾ ನುಡಿಯುತ್ತಾರೆ. ಅವರ ನನಗೆ 4 ವರ್ಷಗಳಿಂದ ಪರಿಚಯು ಇರುತ್ತಾರೆ. ಮೌಲಸಾಬ್ ಗಣಜೂರು ನಡುವೆ ಆಗಿ ಆರೋಪಿಗೆ ಹಾವೇರಿಯಲ್ಲಿ 1 ಎಕರೆ ಜಮೀನು ಕೊಡಿಸಿದ್ದ ಎಂದರೆ ಸರಿ. ಆ ಜಮೀನು 12 ಲಕ್ಷ ಕ್ಕೆ ವ್ಯಾಪಾರ ಆಗಿತ್ತು ಎಂದರೆ ಗೊತ್ತಿಲ್ಲ. ಸಂಚಕಾರ ಪತ್ರ ಮಾಡಲು ಅರೋಪಿಗೆ ಮೌಲಸಾಬ್ ಗಣಜೂರು 1 ತಿಂಗಳು ಕಾಲವಾಧಿ ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಈ ಸಂಬಂದ ಆರೋಪಿ ಮೌಲಸಾಬ್ ಗಣಜೂರು ರವರಿಗೆ ನಿಪಿ-1 ಚೆಕ್ಕನ್ನು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ನಿಪಿ-1 ಚೆಕ್ಕಿನಲ್ಲಿ 5 ಲಕ್ಷದ ಅಕ್ಷರ ಮತ್ತು ಅಂಕಿಯ ಬರವಣಗೆ ಮಾಡಿ ಹಾಗೂ ಸಹಿ ಮಾಡಿ ಆರೋಪಿ ಅದನ್ನು ಮೌಲಸಾಬ್ ಗಣಜೂರು ಅವರಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ 5 ಲಕ್ಷ ಎನ್ನುವ ಅಕ್ಷರ ಹಾಗೂ ಅಂಕಿಯ ಬರವಣೆಗೆ ಮತ್ತು ಸಹಿಯ ಬರವಣೆಗೆ ಹಳೆಯ ಇಂಕಿನಲ್ಲಿದ್ದು ಅದರೆ ಎಂ ಎಸ್ ನೂರಂದೇವರಮಠ ಎನ್ನುವ ಹಾಗೂ ದಿನಾಂಕದ ಬರವಣೆಗೆಯೂ ಹೊಸ ಬರವಣೆಗೆಯಾಗಿರುತ್ತದೆ ಎಂದರೆ ಸಾಕ್ಷಿ ಹೌದು ಎಂ ಎಸ್ ನೂರಂದೇವರಮಠ ಹಾಗೂ ದಿನಾಂಕದ ಬರವಣೆಗೆಯನ್ನು ಚೆಕ್ಕಿನ ಮೇಲೆ ನಾನೇ ಬರೆದುಕೊಂಡು ಹಾಕಿರುತ್ತೇನೆ

ಅಂತಾ ನುಡಿಯುತ್ತಾರೆ. ಅರೋಪಿ ನನಗೆ ಪರಿಚಯವ್ರೂ ಇಲ್ಲ ಮತ್ತು ನನೊಂದಿಗೆ ಯಾವುದೇ ವ್ಯವಹಾರವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಅರೋಪಿ ನನ್ನಿಂದ ಯಾವುದೇ 5 ಲಕ್ಷ ರೂಪಾಯಿ ಹಣ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಮೌಲಸಾಬ್ ಮಿಲಾಪೆಯಾಗಿ ಹೆಸರು ಹಾಗೂ ದಿನಾಂಕವನ್ನು ನಮೂದಿಸದೇ ಕೊಟ್ಟಿರುವ ಆರೋಪಿಯ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಕೇಸ್ ಹಾಕಿದ್ದೇವೆ ಎಂದೆರ ಸರಿಯಲ್ಲ. ಆರೋಪಿ ನನಗೆ ಯಾವುದೇ ರೀತಿಯಿಂದ ಸಂಬಂದ ಇಲ್ಲ , ನನಗೆ ಯಾವುದೇ ಚೆಕ್ಕನ್ನು ಕೊಟ್ಟಿಲ್ಲ ಹೀಗಾಗಿ ಹಣ ವಾಪಸ್ಸು ಕೊಡಲು ಬಾಧ್ಯಸ್ತನಾಗುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.